ಸಿ.ಸಿ ನಂಃ 708/2024

ಪಿ ಡಬ್ಲುಃ 01.

ಸಾಕ್ಷಿಯನ್ನು ದಿನಾಂಕಃ **09.04.2025** ರಂದು ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು.

**ಪಾಟೀ ಸವಾಲುಃ ಶ್ರೀ ಎ.ಆರ್.ಎನ್. ವಕೀಲರಿಂದಃ**

ನಾನು 12 ನೇ ತರಗತಿಯವರೆಗೆ ಓದಿದ್ದೇನೆ. ಜಯಶ್ರೀ ನಾಗಪ್ಪ ಹರಿಕಾಂತ ನನ್ನ ಹೆಂಡತಿ. ಆರೋಪಿಯು ಕೋವಿಡ್ ಮುಂಚೆನಿಂದಲೂ ನಮ್ಮ ದೇವಸ್ಥಾನಕ್ಕೆ ಬರುತ್ತಿದ್ದರು. ನಾನು ಹಾಲಿನ ವ್ಯಾಪಾರವನ್ನು ಮಾಡುತ್ತೇನೆ ಹಾಗೂ ದೇವಸ್ಥಾನದಲ್ಲಿ ಪೂಜೆ ಮಾಡುತ್ತೇನೆ. ನಾನು ದೇವಸ್ಥಾನದಲ್ಲಿ ಪೂಜೆ ಮಾಡುವ ಬಗ್ಗೆ ಪಿರ್ಯಾದಿಯಲ್ಲಿ ಹೇಳಿ ಬರೆಸಿದ್ದು ಇರುವುದಿಲ್ಲ. ನಮ್ಮ ಮನೆಯಲ್ಲಿ 4 ಎಮ್ಮೆ ಹಾಗೂ 5 ಆಕಳು ಇರುತ್ತದೆ. ನಾನು 1 ದಿನಕ್ಕೆ ಅಂದಾಜು 50 ಲೀಟರ್ ಹಾಲನ್ನು ಮಾರಾಟ ಮಾಡುತ್ತೇನೆ. ಆರೋಪಿಯು 2024 ರ ಸಾಲಿನ ಪೂರ್ವದಲ್ಲಿ ಸಾಲ ಬೇಕೆಂದು ನನ್ನನ್ನು ಕೇಳಿದ್ದರು. ಆರೋಪಿಯು ಈ ಸಾಲವನ್ನು ಪಡೆಯುವ ಪೂರ್ವದಲ್ಲಿ ಸಣ್ಣಪುಟ್ಟ ಹಣವನ್ನು ಪಡೆದು ಅದನ್ನು ಚುಕ್ತಾ ಮಾಡುತ್ತಿದ್ದರು. ಆನಂತರ ಈ ಪ್ರಕರಣದ ಸಾಲದ ಮೊತ್ತವನ್ನು ನನ್ನನ್ನು ಕೇಳಿದಾಗ, ನಾನು ವಿಶ್ವಾಸದ ಮೇಲೆ ಹಣವನ್ನು ನೀಡಿದ್ದೆನು. ಆರೋಪಿಯು ಅಂಗಡಿ ಬಾಡಿಗೆ ಕೊಡುವ ಸಲುವಾಗಿ ಹಾಗೂ ಸಂಘಗಳಿಂದ ಪಡೆದ ಸಾಲವನ್ನು ಮರುಪಾವತಿ ಮಾಡಲು ಹಾಗೂ ಪ್ರಧಾನ ಮಂತ್ರಿ ಸ್ಕೀಮನಲ್ಲಿ ಪಡೆದಂತಹ ಸಾಲವನ್ನು ಮರುಪಾವತಿ ಮಾಡಲು ಸಾಲ ಬೇಕೆಂದು ನನ್ನ ಮುಂದೆ ಹೇಳಿದ್ದರು. ಆರೋಪಿಯು 15 ದಿನದ ಒಳಗಾಗಿ ಸಾಲದ ಹಣವನ್ನು ಕೊಡುವುದಾಗಿ ನನಗೆ ಹೇಳಿದ್ದರು. ಸಾಲವನ್ನು ನೀಡುವಾಗ ದಾಖಲೆಯನ್ನು ಮಾಡಿಕೊಂಡ ಬಗ್ಗೆ ನೋಡಿ ಹೇಳಬೇಕಾಗುತ್ತದೆ ಎಂಬುದಾಗಿ ಸಾಕ್ಷಿ ನುಡಿದಿದ್ದಾರೆ. ನಾನು ಸದ್ರಿ ಸಾಲದ ಸಲುವಾಗಿ ಅಗ್ರಿಮೆಂಟನ್ನು ಮಾಡಿಸಿಕೊಂಡಿದ್ದೇನೆ ಎಂದಾಗ ಸಾಕ್ಷಿಯು ನೋಡಿ ಹೇಳುತ್ತೇನೆ ಎಂಬುದಾಗಿ ನುಡಿದಿದ್ದಾರೆ. ನಾವು 3-4 ಜನ ಸೇರಿಕೊಂಡು ಆರೋಪಿಗೆ ನಗದು ರೂಪದಲ್ಲಿ ಹಣವನ್ನು ನೀಡಿದ್ದೇವೆ. ಅವರನ್ನು ಸಾಕ್ಷಿದಾರರನ್ನಾಗಿ ಮಾಡಲು ನನ್ನ ಆಕ್ಷೇಪಣೆ ಇರುವುದಿಲ್ಲ. ಸದ್ರಿರವರ ಹೆಸರನ್ನು ನಾನು ಪಿರ್ಯಾದಿಯಲ್ಲಿ ನಮೂದಿಸಿದ್ದು ಇರುವುದಿಲ್ಲ.

ನನಗೆ ನನ್ನ ಆದಾಯದ ಬಗ್ಗೆ ಗೊತ್ತಿರುವುದಿಲ್ಲ. ರವಿ ನಾಯ್ಕ ರವರ ಕಡೆಯಿಂದ ರೂ.40,000/- ಹಾಗೂ ಭಾಗ್ಯ ದಿನೇಶ ಅಂಬಿಗ ರವರಿಂದ ರೂ. 35,000/-ಹಣವನ್ನು ಹಾಗೂ ಇನ್ನಿಬ್ಬರ ಕಡೆಯಿಂದ ಹಣವನ್ನು ಪಡೆದುಕೊಂಡು ಆರೋಪಿಗೆ ಸಾಲವನ್ನು ನೀಡಿದ್ದೇವೆ.

(ಈ ಹಂತದಲ್ಲಿ ಸಾಕ್ಷಿಯು ಸಮರ್ಪಕವಾಗಿ ಉತ್ತರ ನೀಡದೇ ಇರುವುದರಿಂದ ಪಾಟೀ ಸವಾಲನ್ನು ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತಗೊಳಿಸಲಾಯಿತು.)

ಓ ಹೆ ಕೇ ಸರಿ ಇದೆ.

ಸಹಿ ಇದೆ/-

ಪ್ರ.ದ.ನ್ಯಾದಂ., ಹೊನ್ನಾವರ.